# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

## (ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

CIN ; U40109KA2004SGC035177
ನೊಂದಾಯಿತಕಛೇರಿ ವಿಳಾಸ ನಂ 29
ಕಾವೇರಿಗ್ರಾಮೀಣ ಬ್ಯಾಂಕ್‌ರಸ್ತೆ
ವಿಜಯನಗರ 2 ನೇಹಂತ ಮೈಸೂರು-570017

ಸಹಾಯಕಕಾರ್ಯನಿರ್ವಾಹಕಇಂಜಿನಿಯರ್(ವಿ)
ರವರಕಛೇರಿ ಕಾ ಮತ್ತು ಪಾ ಉಪ ವಿಭಾಗ
ಚಾ.ವಿ.ಸ.ನಿ.ನಿ., ಹುಣಸೂರು
Ph.: 08222 – 252056

ನಿಗಮ ಇ-ಮೇಲ್ :WWW.CESCMYSORE.ORG
email:aeehun@cescmysore.org

---

ಸಂಖ್ಯೆ:ಸಕಾನಿಇಂ(ವಿ)/ಹುಣ/ಸಇಂ(ತಾ)/2017-18/1594-97 ದಿನಾಂಕ: 07-10-2017.

ದಿನಾಂಕ 16-09-2017 ರಂದು ಬೆಳಗ್ಗೆ 11.00 ಗಂಟೆಗೆ ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನ ವೃತ್ತ, ಚಾ.ವಿ.ಸ.ನಿ.ನಿ.,ಮೈಸೂರು ಅದ ಶ್ರೀ ಎನ್.ನರಸಿಂಹೇಗೌಡ ರವರ ಅಧ್ಯಕ್ಷತೆಯಲ್ಲಿ ನಡೆದ ಹುಣಸೂರು ಕಾರ್ಯ ಮತ್ತು ಪಾಲನ ಉಪವಿಭಾಗದ ~~ಗ್ರಾಹಕರ~~ ಜನ ಸಂಪರ್ಕ ಸಭೆಯ ನಡಾವಳಿಗಳು.

ಸಭೆಯಲ್ಲಿ ಹಾಜರಿದ್ದವರು

1. ಶ್ರೀ ಎನ್.ನರಸಿಂಹೇಗೌಡ ರವರು, ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ, ಚಾ.ವಿ.ಸ.ನಿ.ನಿ., ಮೈಸೂರು
2. ಶ್ರೀ ನಾಗೇಶ್ ರವರು ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಚಾವಿಸನಿನಿ, ಕಾರ್ಯ ಮತ್ತು ಪಾಲನ ವಿಭಾಗ, ಹುಣಸೂರು
3. ಶ್ರೀ ಕಲೀಂ ಅಹಮ್ಮದ್, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ಉಪ ವಿಭಾಗ ಹುಣಸೂರು
4. ಶ್ರೀ ಶಿವಪ್ರಸಾದ್ .ಆರ್.ಬಿ., ಸಹಾಯಕ ಇಂಜಿನಿಯರ್(ತಾ) ಕಾರ್ಯ ಮತ್ತು ಪಾಲನಾ ಉಪ ವಿಭಾಗ ಹುಣಸೂರು
5. ಶ್ರೀ ಪುರುಷೋತ್ತಮ್, ಸಹಾಯಕ ಇಂಜಿನಿಯರ್ (ವಿ), ಪಟ್ಟಣ ಶಾಖೆ, ಹುಣಸೂರು
6. ಶ್ರೀ ಚನ್ನಕೇಶವ, ಕಿರಿಯ ಇಂಜಿನಿಯರ್ (ವಿ) ಶಾಖಾಧಿಕಾರಿಗಳು ರತ್ನಪುರಿ ಶಾಖೆ
7. ಶ್ರೀ ಶಂಬುಲಿಂಗಯ್ಯ ಕಿರಿಯ ಇಂಜಿನಿಯರ್(ಪ್ರಭಾರ)(ವಿ) ಶಾಖಾಧಿಕಾರಿಗಳು ಗೋವಿಂದನಹಳ್ಳಿ ಶಾಖೆ
8. ಶ್ರೀ. ಕೃಷ್ಣಕುಮಾರ್, ಹಿರಿಯ ಸಹಾಯಕ, ಕಂದಾಯ ಶಾಖೆ, ಹುಣಸೂರು ಉಪವಿಭಾಗ, ಹುಣಸೂರು

ಸಭೆಯಲ್ಲಿ ಉಪಸ್ಥಿತರಿದ್ದಂತಹ ಎಲ್ಲಾ ಅಧಿಕಾರಿಗಳು ಹಾಗೂ ವಿದ್ಯುತ್ ಗ್ರಾಹಕರುಗಳನ್ನು ಸ್ವಾಗತಿಸಿ ಸಭೆ ಪ್ರಾರಂಭಿಸಲಾಯಿತು.

ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ರವರು ವಿದ್ಯುತ್ ಗ್ರಾಹಕ ಜನ ಸಂಪರ್ಕ ಸಭೆಯ ಮಹತ್ವದ ಬಗ್ಗೆ ತಿಳಿಸುತ್ತಾ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ನಿರ್ದೇಶನದ್ವಯ ಪ್ರತಿ 3 ತಿಂಗಳಿಗೊಮ್ಮೆ ಉಪವಿಭಾಗ ಮಟ್ಟದಲ್ಲಿ ಗ್ರಾಹಕ ಸಂಪರ್ಕ ಸಭೆಯನ್ನು ನಡೆಸಲಾಗುವುದು. ಈ ಸಭೆಯಲ್ಲಿ ಉಪವಿಭಾಗ ವ್ಯಾಪ್ತಿಯ ಗ್ರಾಹಕರುಗಳು ಭಾಗವಹಿಸಿ ವಿದ್ಯುತ್ ಸರಬರಾಜಿನ ಕುಂದು ಕೊರತೆಗಳ ಬಗ್ಗೆ ಚರ್ಚಿಸಿ ಸಮಸ್ಯೆಗಳನ್ನು ಪರಿಹರಿಸಲು ಮತ್ತು ಸೇವೆಯನ್ನು ಉನ್ನತೀಕರಿಸಲು ಅಗತ್ಯವಿರುವ ಸಲಹೆ ಸೂಚನೆಗಳನ್ನು ನೀಡಬಹುದಾಗಿರುತ್ತದೆ ಎಂದು ಸಭೆಗೆ ತಿಳಿಸಿದರು.

ಸಭೆಯ ಪ್ರಾರಂಭದಲ್ಲಿ ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ರವರು ಸಭೆಯಲ್ಲಿ ಹಾಜರಿದ್ದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನ ಉಪ ವಿಭಾಗ ಹುಣಸೂರು ರವರಿಂದ ಹಿಂದಿನ ಸಭೆಯಲ್ಲಿ ದಾಖಲಾದಂತಹ ದೂರುಗಳಿಗೆ ಅನುಪಾಲನ ವರದಿಯನ್ನು ಸಲ್ಲಿಸಲು ಸೂಚಿಸಿದರು. ಇದರಂತೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನ ಉಪ ವಿಭಾಗ ಹುಣಸೂರು ರವರು ಹಿಂದಿನ ಸಭೆಯಲ್ಲಿ ದಾಖಲಾದಂತಹ ದೂರುಗಳ ಬಗ್ಗೆ ಹಾಗೂ ಉಪವಿಭಾಗದಿಂದ ಕೈಗೊಂಡಿರುವ ಕ್ರಮಗಳ ಬಗ್ಗೆ ಸಭೆಗೆ ತಿಳಿಸಿದರು. ಇದರಲ್ಲಿ ಕೆಲವು ದೂರುಗಳನ್ನು ಬಗೆ ಹರಿಸುವ ಸಂಬಂಧ ಅಂದಾಜುಪಟ್ಟಿಗಳು ಮಂಜೂರಾತಿ ಹಂತದಲ್ಲಿ ಇರುವುದರ ಬಗ್ಗೆ ವಿಚಾರಿಸಿ ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ರವರು ಸಭೆಯಲ್ಲಿ ಹಾಜರಿದ್ದ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಹುಣಸೂರು ವಿಭಾಗ ಹಾಗೂ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಹುಣಸೂರು ಉಪವಿಭಾಗ ರವರಿಗೆ ಸೂಚಿಸಿ ಈ ಸಭೆಗಳಲ್ಲಿ ದಾಖಲಾದಂತಹ ದೂರುಗಳನ್ನು ಪ್ರಥಮ ಆದ್ಯತೆಯ ಮೇರೆಗೆ ಕೈಗೊಂಡು ತ್ವರಿತವಾಗಿ ಮಂಜೂರಾತಿ ನೀಡಿ ಕಾಮಗಾರಿಗಳನ್ನು ಮುಂದಿನ ಸಭೆಯ ಒಳಗೆ ಸಂಪೂರ್ಣವಾಗಿ ಬಗೆ ಹರಿಸಲು ಕಟ್ಟುನಿಟ್ಟಿನ ಕ್ರಮವನ್ನು ಕೈಗೊಳ್ಳಬೇಕೆಂದು ನಿರ್ದೇಶನವನ್ನು ನೀಡಿದರು.

ನಂತರ ಸಭೆಯಲ್ಲಿ ಹಾಜರಿದ್ದಂತಹ ಗ್ರಾಹಕರು ಈ ಕೆಳಕಂಡಂತೆ ತಮ್ಮ ಅಹವಾಲುಗಳನ್ನು ಮಾನ್ಯ ಅಧ್ಯಕ್ಷರ ಗಮನಕ್ಕೆ ತಂದಿದ್ದು, ಇದರ ವಿವರ ಈ ಕೆಳಗಿನಂತಿದೆ.

| ಕ್ರ. ಸಂ | ಅರ್ಜಿದಾರರ ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆ | ವಿಷಯ | ಕ್ರಮ |
|---|---|---|---|
| 1. | ಶ್ರೀ.ವಿಠಲ. ನಂಜಾಪುರ. 8150030749. | • ನಂಜಾಪುರ ಗ್ರಾಮದಲ್ಲಿ 63 KVA IP TC ಇದ್ದು ಇವರಲ್ಲಿ 16 ಜನ ಸಂಪರ್ಕ ಪಡೆದಿರುತ್ತಾರೆ. ಇದರಿಂದ ಲೋ ವೋಲ್ಟೇಜ್ ಸಮಸ್ಯೆ ಇದ್ದು ಹೆಚ್ಚುವರಿ TC ನೀಡಬೇಕೆಂದು ಕೋರಿದರು. | ಮಾನ್ಯಅಧೀಕ್ಷಕಇಂಜಿನಿಯರ್(ವಿ) ರವರು ಈಗಾಗಲೇ ಕಾಮಗಾರಿಯು ಮಂಜೂರು ಆಗಿದ್ದು, ಮೇ॥ ಗುರು ಎಲೆಕ್ಟ್ರಿಕಲ್ಸ್ ರವರಿಗೆ ಗುತ್ತಿಗೆ ನೀಡಲಾಗಿದೆ ಎಂದು ತಿಳಿಸಿ. ಕಾರ್ಯ ನಿರ್ವಾಹಕ ಇಂಜಿನಿಯರ್(ವಿ). ರವರಿಗೆ ಕಾಮಗಾರಿಯನ್ನು ಬೇಗ ಪೂರ್ಣಗೊಳ್ಳುವಂತೆ ಕ್ರಮ ವನ್ನು ಕೈಗೊಳ್ಳಲು ಸೂಚಿಸಿದರು. |
| 2. | ಶ್ರೀ.ಮಹದೇವ ಕಲ್ಲುಣಿಕೆ. 9740496984 | * ಕಲ್ಲುಣಿಕೆ ಬಡಾವಣೆ ಯಲ್ಲಿ ಎಲ್ ಟಿ ಮಾರ್ಗಗಳ ಅಂತರ ಹೆಚ್ಚಿದ್ದು ಮಧ್ಯಂತರ ಕಂಬಗಳನ್ನು ಅಳವಡಿಸುವಂತೆ ಕೋರಿದರು | ಮಾನ್ಯ ಅಧೀಕ್ಷಕ ಇಂಜಿನಿಯರ್ ರವರು ಹುಣಸೂರು ನಗರದಲ್ಲಿ IPDS ಯೋಜನೆಯ ಕಾಮಗಾರಿಯು ಚಾಲನೆ ಆಗಿದ್ದು ಯೋಜನೆಯಲ್ಲಿ ಮಾರ್ಗಗಳ ಅಂತರ ಹೆಚ್ಚಿರುವ ಸ್ಥಳಗಳಲ್ಲಿ ಮಧ್ಯಂತರ ಕಂಬಗಳನ್ನು ಅಳವಡಿಸುವಂತೆ ನಗರ ಶಾಖೆಗೆ ಶಾಖಾಧಿಕಾರಿಯಾದ ಶ್ರೀ.ಪುರುಷೋತ್ತಮ್ ರವರಿಗೆ ಸೂಚಿಸಿದರು. |
| 3. | ಶ್ರೀ.ಕುಮಾರ್, ಚನ್ನಸೋಗೆ. 9945456329 | * ಚನ್ನಸೋಗೆ ಗೇಟ್ ಬಳಿ 20 ಮನೆಗಳಿಗೆ NJY ವಿದ್ಯುತ್ ಕಲ್ಪಿಸಲು ಕೋರಿದರು. | ಮಾನ್ಯ ಅಧೀಕ್ಷಕ ಇಂಜಿನಿಯರ್ ರವರು ಸಂಬಂಧಿಸಿದ ಚಿಲ್ಕುಂದ ಶಾಖೆಯ ಶಾಖಾಧಿಕಾರಿಯವರಿಗೆ ಸ್ಥಳ ಪರಿಶೀಲಿಸಿ ಅಂದಾಜು ಪಟ್ಟಿ ಸಲ್ಲಿಸಲು ಆದೇಶಿಸಿದರು.ಹಾಗೂ ಸಭೆಯಲ್ಲಿ ಹಾಜರಿದ್ದ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರಿಗೆ ಕೂಡಲೇ ಮಂಜೂರಾತಿಯನ್ನು ನೀಡಲು ಸೂಚಿಸಿದ |
| 4. | ಶ್ರೀ.ಶಂಕರ, ಕಾಮಗೌಡನಹಳ್ಳಿ ಬೋರೆ. 9945678009 | • ಕಾಮಗೌಡನಹಳ್ಳಿ ಗ್ರಾಮದಲ್ಲಿ 63 KVA IP TC ಇದ್ದು 16 ಜನ ಸಂಪರ್ಕ ಪಡೆದಿರುತ್ತಾರೆ. ಇದರಿಂದ ಲೋ ವೋಲ್ಟೇಜ್ ಸಮಸ್ಯೆ ಇದ್ದು ಹೆಚ್ಚುವರಿ TC ನೀಡಬೇಕೆಂದು ಕೋರಿದರು. | ಮಾನ್ಯಅಧೀಕ್ಷಕಇಂಜಿನಿಯರ್(ವಿ) ರವರು ಈಗಾಗಲೇ ಕಾಮಗಾರಿಯು ಮಂಜೂರು ಆಗಿದ್ದು, ಮೇ॥ ಗುರು ಎಲೆಕ್ಟ್ರಿಕಲ್ಸ್ ರವರಿಗೆ ಗುತ್ತಿಗೆ ನೀಡಲಾಗಿದೆ ಎಂದು ತಿಳಿಸಿ, ಕಾರ್ಯ ನಿರ್ವಾಹಕ ಇಂಜಿನಿಯರ್(ವಿ), ರವರಿಗೆ ಕಾಮಗಾರಿಯನ್ನು ಬೇಗ ಪೂರ್ಣಗೊಳ್ಳುವಂತೆ ಕ್ರಮ ವನ್ನು ಕೈಗೊಳ್ಳಲು ಸೂಚಿಸಿದರು. |
| 5. | ಶ್ರೀ.ರವಿ ಕುಮಾರ್, ಹುಣಸೂರ್ ಟೌನ್. 9448260245 | • ತಮ್ಮ ಮನೆಯ ಮಾಪಕ ಓದುವ ದಿನಾಂಕ 16 ಆಗಿರುತ್ತದೆ, ಆದರೆ ಪ್ರತಿ ತಿಂಗಳು ದಿನಾಂಕ 20 ರಂದು ಮಾಪಕ ಓದಿ ಬಿಲ್ಲ್ ನೀಡುತ್ತಿರುವುದರಿಂದ ಬಿಲ್ಲ್ ಹೆಚ್ಚಿನ TARIFF ನಲ್ಲಿ ಬಂದಿರುತ್ತದೆ ಆದ್ದರಿಂದ ನಿಗಧಿತ ದಿನಾಂಕದಂದು ಬಿಲ್ಲನ್ನು ನೀಡಬೇಕೆಂದು ಕೋರಿದರು. | ಈ ಬಗ್ಗೆ ಮಾನ್ಯ ಅಧ್ಯಕ್ಷರು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಹಾಗೂ ಹಿರಿಯ ಸಹಾಯಕರಿಂದ ಮಾಹಿತಿ ಪಡೆದು ಹುಣಸೂರು ಉಪವಿಭಾಗದ ನಗರ ಶಾಖೆಗೆ ಸಂಬಂಧಿಸಿದಂತೆ ಆರ್-ಎ.ಪಿ.ಡಿ.ಆರ್.ಪಿ ತಂತ್ರಾಂಶದಲ್ಲಿ ಗ್ರಾಹಕರಿಗೆ ಬಿಲ್ಲನ್ನು ನಿಗಧಿತ ಅವಧಿಯಲ್ಲಿ ನೀಡಲು ಎಸ್.ಬಿ.ಎಂ ಯಂತ್ರಗಳ ಕೊರತೆ ಇರುವುದರ ಬಗ್ಗೆ ಮಾಹಿತಿಯನ್ನು ಪಡೆದು ಸಭೆಯಲ್ಲಿ ಹಾಜರಿದ್ದ |

| | | | |
|---|---|---|---|
| | | | ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರಿಗೆ ಹುಣಸೂರು ನಗರ ಶಾಖೆಗೆ ಅವಶ್ಯಕವಾಗಿ ಬೇಕಾಗಿರುವ ಎಸ್.ಐ.ಎಂ ಯಂತ್ರಗಳನ್ನು ಕೂಡಲೇ ಖರೀದಿಸಿ ನೀಡಬೇಂದು ಸೂಚಿಸಿದರು. |
| 6. | ಶ್ರೀ.ಮೋಹನ್ ಕುಮಾರ್<br>9448228159 | • ಶಾಂತಿಪುರ ಫೀಡರ್ ನಲ್ಲಿ ತಮ್ಮ ಸ್ವಾವರವಿದ್ದು ಹಾಲಿ ರತ್ನಪುರಿ ಶಾಖೆಗೆ ಸೇರಿರುತ್ತದೆ, ಆದರೆ ಗದ್ದಿಗೆ ಶಾಖಾಧಿಕಾರಿಯವರು ಫೀಡರ್‌ಗೆ ಮಾರ್ಗ ಮಕ್ತತೆ ಹೆಚ್ಚಾಗಿ ತೆಗೆದುಕೊಳ್ಳುವುದರಿಂದ ವಿದ್ಯುತ್ ಅಡಚಣೆ ಹೆಚ್ಚಿರುತ್ತದೆ ಎಂದು ತಿಳಿಸಿದರು.<br><br>* ವಿದ್ಯುತ್ ಸ್ಥಗಿತಗೊಳಿಸುವ ಮುಂಚೆ ಮಾಹಿತಿ ನೀಡುವ ವ್ಯವಸ್ಥೆ ಕಲ್ಪಿಸಬೇಕೆಂದು ಕೋರಿದರು. | ಈ ಬಗ್ಗೆ ಮಾನ್ಯ ಅಧೀಕ್ಷಕ ಇಂಜಿನಿಯರ್ ರವರು ಮಾಹಿತಿಯನ್ನು ಪಡೆದು ಸಂಬಂಧಿಸಿದ ಜಿ.ವಿ.ಗುಡಿ ವಿ.ವಿ.ಕೇಂದ್ರದಲ್ಲಿ ಹೆಚ್ಚುವರಿ ಬ್ರೇಕರ್ ಅಳವಡಿಸುವ ಕಾಮಗಾರಿಯು ಈಗಾಗಲೇ ಡಿ.ಡಿ.ಯು.ಜಿ.ಜೆ.ವೈ ಯೋಜನೆಯಲ್ಲಿ ಮಂಜೂರಾಗಿದ್ದು, ಈ ಕಾಮಗಾರಿಯನ್ನು ಕೈಗೊಂಡು ಪೂರ್ಣಗೊಳಿಸುವ ವರೆಗ ತಾತ್ಕಾಲಿಕವಾಗಿ ಸಹಾಯಕ ಕಾರ್ಯನಿವಾಹಕ ಇಂಜಿನಿಯರ್(ವಿ) ರವರಿಗೆ ಹೆಚ್ಚುವರಿ GOS ನ್ನು ಅಳವಡಿಸಿ ವಿದ್ಯುತ್ ಅಡಚಣೆಯನ್ನು ನಿಯಂತ್ರಿಸಲು ಆದೇಶಿಸಿದರು.<br><br>ಮಾನ್ಯ ಅಧೀಕ್ಷಕ ಇಂಜಿನಿಯರ್ ರವರು ಮಾತನಾಡಿ ನಗರ ಭಾಗಗಳಲ್ಲಿ ಊರ್ಜಾಮಿತ್ರ ತಂತ್ರಾಂಶದಿಂದ ಈ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಅದಷ್ಟು ಬೇಗ ಗ್ರಾಮೀಣ ಭಾಗಗಳಲ್ಲೂ ವಿಸ್ತರಿಸಲಾಗುವುದು ಎಂದು ತಿಳಿಸಿದರು. |
| 7. | ಶ್ರೀ.ಬಿ.ಎಸ್. ದೇವದತ್ತ ಬೆಟ್ಟೂರ್ ಗ್ರಾಮ.<br>9480442729 | * ಕಟ್ಟೆಮಳವಾಡಿ ಫೀಡರ್ .ಕಿರಿಜಾಜಿ ಫೀಡರ್ . ಹಿರಿಕ್ಯಾತನಹಳ್ಳಿ ಫೀಡರ್‌ಗಳು ಮತ್ತು ಸೆಕೆಂಡರಿ ಮಾರ್ಗವು ಸಹ ಒಂದೇ ಕಂಬದಲ್ಲಿದ್ದು ಮಾರ್ಗಗಳ ಅಂತರ ಹೆಚ್ಚಿದ್ದು ಮಧ್ಯಂತರ ಕಂಬದ ಅವಶ್ಯಕತೆ ಇದೆ ಎಂದು ತಿಳಿಸಿದರು. | ಮಾನ್ಯ ಅಧೀಕ್ಷಕ ಇಂಜಿನಿಯರ್ ರವರು ಮತನಾಡಿ ಈ ಬಗ್ಗೆ ಸ್ಥಳಪರಿಶೀಲಿಸಿ ಅಗತ್ಯ ಕ್ರಮವನ್ನು ಕೈಗೊಂಡು ಕೂಡಲೇ ಮಧ್ಯಂತರ ಕಂಬಗಳನ್ನು ಅಳವಡಿಸಲು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಹಾಗೂ ಶಾಖಾಧಿಕಾರಿಗಳಿಗೆ ಸೂಚಿಸಿದರು |
| 8. | ಶ್ರೀ.ರಾಜೇಂದ್ರ, ಸಿ ಬಿ ಟಿ ಕಾಲೋನಿ.<br>8971233639 | * ರತ್ನಪುರಿ ಗ್ರಾಮದಲ್ಲಿ ಶಾಖಾ ಕಛೇರಿಗೆ ಸ್ವಂತ ಕಟ್ಟಡವನ್ನು ಕೇಳಿದರು.<br><br>* ಸಿ ಬಿ ಟಿ ಕಾಲೋನಿಯ ಅರ್ಕೇಶ್ವರ ದೇವಸ್ಥಾನಕ್ಕೆ NJY ವಿದ್ಯುತ್ ಕೇಳಿದರು. | ಮಾನ್ಯ ಅಧೀಕ್ಷಕ ಇಂಜಿನಿಯರ್ ರವರು ಮತನಾಡಿ ರತ್ನಪುರಿ ಗ್ರಾಮದಲ್ಲಿ ಹಾಲಿ ಇರುವ ಶಾಖಾ ಕಛೇರಿಗೆ ಸ್ವಂತ ಕಟ್ಟಡವನ್ನು ಕಟ್ಟಲು ಸಂಬಂಧಿಸಿದ ಗ್ರಾಮ ಪಂಚಾಯ್ತಿವತಿಯಿಂದ ಜಾಗವನ್ನು ಗುರುತಿಸಿ ನೀಡಲು ಸಿದ್ಧರಿದ್ದಲ್ಲಿ, ನಿಗಮದ ವತಿಯಿಂದ ಶಾಖಾ ಕಛೇರಿಗೆ ಸ್ವಂತ ಕಟ್ಟಡವನ್ನು ಕಟ್ಟಲು ಕ್ರಮವನ್ನು ಕೈಗೊಳ್ಳಲಾಗುವುದು ಎಂದು ತಿಳಿಸಿದರು. ಹಾಗೂ ಈ ಬಗ್ಗೆ ಕ್ರಮವನ್ನು ಕೈಗೊಳ್ಳಲು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರಿಗೆ ಸೂಚಿಸಿದರು.<br><br>ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ರವರು ಮತನಾಡಿ ಅರ್ಕೇಶ್ವರ ದೇವಸ್ಥಾನಕ್ಕೆ NJY ವಿದ್ಯುತ್‌ಕಲ್ಪಿಸಲು ಸುಮಾರು 15-18 ಹೆಚ್ಚುವರಿ |

| | | | |
|---|---|---|---|
| | | | ವಿದ್ಯುತ್ ಕಂಬಗಳ ಅವಶ್ಯಕತೆ ಇರುವುದರಿಂದ ಇಲಾಖಾ ವ್ಯಾಪ್ತಿಯಿಂದ ಮಾಡಲು ಅವಕಾಶ ಇರುವುದಿಲ್ಲ ಎಂದು ವಿವರಿಸಿದರು. |
| 9. | ಶ್ರೀ.ಕೃಷ್ಣ ಶೆಟ್ಟಿ, ಉದ್ದೂರು<br>9342980404 | ರತ್ನಪುರಿ ಶಾಖಾಧಿಕಾರಿ ರವರಿಗೆ ಹನಗೂಡು ಪ್ರಭಾರ ಹುದ್ದೆಯನ್ನು ನೀಡಿದ್ದು, ಹನಗೂಡು ಶಾಖೆಯ ಪ್ರಭಾರ ಹುದ್ದೆಯಿಂದ ತೆರವುಗೊಳಿಸಿ ಎಂದು ಕೇಳಿದರು.<br><br>* ಎಲ್ ಟಿ ಮಾರ್ಗವು ರೋಡ್ ಕ್ರಾಸಿಂಗ್ ಆಗಿದ್ದು ಮಾರ್ಗವನ್ನು ಸ್ಥಳಾಂತರಿಸಲು ಕೋರಿದರು. | ಮಾನ್ಯ ಅಧೀಕ್ಷಕ ಇಂಜಿನಿಯರ್ ರವರು ಮತನಾಡಿ ಕಿರಿಯ ಇಂಜಿನಿಯರ್(ವಿ) ರವರ ಹೊಸ ನೇಮಕಾತಿ ಪ್ರಕ್ರಿಯೆಯು ಪ್ರಗತಿಯಲ್ಲಿದ್ದು ಆದಷ್ಟು ಬೇಗ ಹೊಸ ಶಾಖಾಧಿಕಾರಿಯನ್ನು ನಿಯೋಜಿಸಲಾಗುವುದು ಎಂದು ತಿಳಿಸಿದರು.<br><br>ಮಾನ್ಯ ಅಧೀಕ್ಷಕ ಇಂಜಿನಿಯರ್ ರವರು ಮತನಾಡಿ ಈ ಬಗ್ಗೆ ಸ್ಥಳಪರಿಶೀಲಿಸಿ ಅಗತ್ಯ ಅಂದಾಜುಪಟ್ಟಿಯನ್ನು ತಯಾರಿಸಿ ಕ್ರಮವನ್ನು ಕೈಗೊಂಡು ಸರಿಪಡಿಸಲು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಹಾಗೂ ಶಾಖಾಧಿಕಾರಿಗಳಿಗೆ ಸೂಚಿಸಿದರು |
| 10 | ಶ್ರೀ.ಜಮೀರ್ ಅಹಮ್ಮದ್, ಆಜಾದ್ ನಗರ.<br>994501745 | * ಆಜಾದ್ ನಗರ ಗ್ರಾಮಕ್ಕೆ ಹಾಲಿ ಇರುವ NJY ಫೀಡರ್ ನ ಅಡಚಣೆ ಹೆಚ್ಚಿದ್ದು ಪ್ರತ್ಯೇಕ ಫಿಡರ್ ಕಲ್ಪಿಸುವಂತೆ ಕೇಳಿದರು<br><br>* ಬೀದಿ ದೀಪ ಹಗಲು ವೇಳೆಯಲ್ಲಿಯು ಸಹ ON ಆಗಿರುತ್ತದೆ ಎಂದು ತಿಳಿಸಿದರು.<br><br>* ಪರಿವರ್ತಕಗಲು ವಿಫಲಗೊಂಡಲ್ಲಿ ಬದಲಾಯಿಸುವಲ್ಲಿ ವಿಳಂಬವಾಗುತ್ತಿರುವುದನ್ನು ಸರಿಪಡಿಸುವಂತೆ ಮನವಿ ಮಾಡಿಕೊಂಡರು | ಮಾನ್ಯ ಅಧೀಕ್ಷಕ ಇಂಜಿನಿಯರ್ ರವರು ಈ ಬಗ್ಗೆ ಮಾಹಿತಿಯನ್ನು ಪಡೆದು ಸಂಬಂಧಿಸಿದ ಹೊಸೂರುಗೇಟ್ 66/11 ಕೆ.ವಿ ವಿ.ವಿ.ಕೇಂದ್ರದಿಂದ, ಗುರುಪುರ ನಿರಂತರ ಜ್ಯೋತಿ ವಿದ್ಯುತ್ ಮಾರ್ಗವನ್ನು ಬೇರ್ಪಡಿಸಲು ಬ್ರೇಕರ್‌ನ ಅವಶ್ಯಕತೆ ಇದ್ದು, ಸಂಬಂಧಿಸಿದ ವಿ.ವಿ.ಕೇಂದ್ರದಲ್ಲಿ ಪರಿವರ್ತಕದ ಸಾಮರ್ಥ್ಯವನ್ನು ಹೆಚ್ಚುವರಿಗೊಳಿಸುವ ಪ್ರಕ್ರಿಯೆಯು ಪೂರ್ಣಗೊಂಡ ನಂತರ ಹೆಚ್ಚುವರಿ ಬ್ರೇಕರ್ ಲಭ್ಯವಾಗಲಿದ್ದು, ನಂತರ ಸದರಿ ವಿದ್ಯುತ್ ಮಾರ್ಗವನ್ನು 2 ಪ್ರತ್ಯೇಕ ಮಾರ್ಗಗಳಾಗಿ ವಿಂಗಡಿಸಿ ವಿದ್ಯುತ್ ಅಡಚಣೆಗಳನ್ನು ನಿಯಂತ್ರಿಸಲಾಗುವುದು ಎಂದು ತಿಳಿಸಿದರು.<br><br>ಬೀದಿ ದೀಪದ ನಿರ್ವಹಣೆ ಕಾರ್ಯವು ಸಂಬಂಧಿಸಿದ ನಗರ ಸಭೆ/ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಬರುತ್ತದೆ ಈ ಬಗ್ಗೆ ಸಂಬಂಧಿಸಿದ ನಗರಸಭೆ /ಗ್ರಾಮ ಪಂಚಾಯ್ತಿಗಳ ಗಮನಕ್ಕೆ ತಂದು ಬೀದಿ ದೀಪಗಳನ್ನು ಸರಿಯಾದ ಸಮಯಕ್ಕೆ ನಿಯಂತ್ರಿಸಲು ಸಂಬಂಧಿಸಿದ ಶಾಖಾಧಿಕಾರಿಗಳಿಗೆ ಹಾಗೂ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರಿಗೆ ಸೂಚಿಸಿದರು.<br><br>ವಿಫಲಗೊಂಡ ಪರಿವರ್ತಕಗಳನ್ನು ಸಕಾಲದಲ್ಲಿ ಬದಲಾಯಿಸಲು ಈಗಾಗಲೇ ಕ್ರಮವನ್ನು ಕೈಗೊಳ್ಳಲಾಗಿದ್ದು, ಅಕ್ರಮವಾಗಿ |